**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,**
ದೇವದುರ್ಗ.

ಉಪಸ್ಥಿತರು ಃ **ಶ್ರೀ. ರಫೀಕ್ ಅಹ್ಮದ್ ಬಿಎ., ಎಲ್‌ಎಲ್.ಬಿ**
**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,** ದೇವದುರ್ಗ.

ದಿನಾಂಕಃ **20 ನೇ ಜೂನ್ 2026**

**ಕ್ರಿಮಿನಲ್. ಮಿಸ್. ನಂ.18/2026**

1. ಗಂಗಮ್ಮ ಗಂಡ ಲೇಟ್ ಸಿದ್ದಪ್ಪ, ವಯಸ್ಸು 57 ವರ್ಷ, ಉಃ ಕೃಷಿ,
2. ಭೀಮಲಿಂಗಮ್ಮ ಗಂಡ ಲೇಟ್ ಪ್ರಭು, ವಯಸ್ಸು 42 ವರ್ಷ, ಉಃ ಕೃಷಿ,
   ವಾಃ ರಟ್ಟಡಗಿ, ತಾಃ ಶಹಪೂರ, ಜಿಃ ಯಾದಗಿರಿ.
3. ಮಲ್ಲಮ್ಮ ಗಂಡ ಅಮರೇಶ, ವಯಸ್ಸು 39 ವರ್ಷ, ಉಃ ಕೃಷಿ,
4. ರಾಮಲಿಂಗಮ್ಮ ಗಂಡ ಲೇಟ್ ಭೀಮರಾಯ, ವಯಸ್ಸು 31 ವರ್ಷ,ಉಃ ಕೃಷಿ,
5. ರಾಧಿಕ ತಂದೆ ಲೇಟ್ ಭೀಮರಾಯ, ವಯಸ್ಸು 05 ವರ್ಷ, ಉಃ ಕೃಷಿ,
6. ಚನ್ನಮ್ಮ ಗಂಡ ಬಸವ, ವಯಸ್ಸು 35 ವರ್ಷ, ಉಃ ಕೃಷಿ,
7. ರೇಣುಕಮ್ಮ ಗಂಡ ಶಂಕರ್, ವಯಸ್ಸು 27 ವರ್ಷ, ಉಃ ಕೃಷಿ,
   ವಾಃ ಸಿಯಾತಲಾಬ ರಾಯಚೂರು, ತಾ: ರಾಯಚೂರು, ಜಿಲ್ಲೆ: ರಾಯಚೂರು.
8. ಮುತ್ತಪ್ಪ ತಂದೆ ಲೇಟ್ ಸಿದ್ದಪ್ಪ, ವಯಸ್ಸು 23 ವರ್ಷ, ಉಃ ಕೃಷಿ,

1, 3 ರಿಂದ 6 ಮತ್ತು 8 ಇವರ ವಾಃ ಯಾಟಗಲ್, ತಾ: ದೇವದುರ್ಗ,
ಜಿಲ್ಲೆ: ರಾಯಚೂರು.

**.........ಅರ್ಜಿದಾರರು**
**(ಶ್ರೀ.ಎಮ್.ಎನ್.ಕೆ ವಕೀಲರಿಂದ )**

**ಃಃವಿರುದ್ದಃಃ**

1.ಜನನ-ಮರಣ ನೋಂದಣಾಧಿಕಾರಿಗಳು,
ದೇವದುರ್ಗ ತಾಲ್ಲೂಕು.
ದೇವದುರ್ಗ ತಾ||, ರಾಯಚೂರು ಜಿಲ್ಲೆ.
2.ಸಂಬಂಧಪಟ್ಟವರು ಯಾರಾದರೂಇದ್ದರೆ.

**_.ಎದುರುದಾರರು**
(**ಏಕತರ್ಫಿ**)

**ಃಃ ತೀರ್ಪು ಃಃ**

1 ರಿಂದ 8 ನೇ ಅರ್ಜಿದಾರರು ಅರ್ಜಿಯನ್ನು ಜನನ ಹಾಗೂ ಮರಣ ನೊಂದಣಿ ಕಾಯಿದೆ ಕಲಂ 13(3) ರ ಅಡಿಯಲ್ಲಿ ಸಲ್ಲಿಸಿರುತ್ತಾರೆ.

**2. <u>ಅರ್ಜಿಯ ಸಾರಾಂಶ ಈ ಕೆಳಕಂಡಂತೆಃ</u>**

1 ನೇ ಅರ್ಜಿದಾರರ ಮಗನಾದ ಲೇಟ್ ಭೀಮರಾಯ ತಂದೆ ಸಿದ್ದಪ್ಪ, ಇವರು ದಿನಾಂಕಃ 15-11-2020 ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕು, ಯಾಟಗಲ್ ಗ್ರಾಮದ ಅವರ ಮನೆಯಲ್ಲಿ ಮೃತಪಟ್ಟಿರುತ್ತಾರೆ. ಈ ಬಗ್ಗೆ ಎದುರುದಾರ ಕಚೇರಿಯಲ್ಲಿನ ಜನನ ಮತ್ತು ಮರಣಗಳ ನೊಂದಣಿ ರಿಜಿಸ್ಟರ್ ನಲ್ಲಿ ಮಾಹಿತಿ ದಾಖಲಾಗಿರುವುದಿಲ್ಲ. ಅರ್ಜಿದಾರರಿಗೆ ಸರಿಯಾದ ಮಾಹಿತಿ ಇಲ್ಲದ ಕಾರಣ ತನ್ನ ಹೆಂಡತಿಯವರ ಮರಣದ ವಿಷಯವನ್ನು ಸಕ್ಷಮ ಅವಧಿಯಲ್ಲಿ ಎದುರುದಾರರಿಗೆ ತಿಳಿಸಿರುವುದಿಲ್ಲ. ಈ ಕಾರಣಕ್ಕಾಗಿ ಅರ್ಜಿದಾರ ಮಗನಾದ ಮರಣದ ದಾಖಲೆಗಳು ಲಭ್ಯವಿರುವುದಿಲ್ಲ. 1 ರಿಂದ 8 ನೇ ಅರ್ಜಿದಾರರಿಗೆ ವಂಶವೃಕ್ಷವನ್ನು ಪಡೆಯುವ ಹಾಗೂ ಇನ್ನಿತರ ಕಾರ್ಯಕ್ಕಾಗಿ ಸದರಿಯವರ ಮರಣ ಪ್ರಮಾಣ ಪತ್ರದ ಅವಶ್ಯಕತೆ ಇರುವುದಾಗಿ ಎದುರುದಾರರಿಗೆ ಅರ್ಜಿಯನ್ನು ಸಲ್ಲಿಸಿದ್ದು, ಎದುರುದಾರರು ತಮ್ಮ ದಾಖಲೆಗಳಲ್ಲಿ 1 ನೇ ಅರ್ಜಿದಾರರ ಮಗನ ಮರಣ ಪ್ರಮಾಣ ಪತ್ರ ನೀಡುವಂತೆ ಆದೇಶಿಸಬೇಕೆಂದು ಅರ್ಜಿದಾರರು ವಿನಂತಿಸಿರುತ್ತಾರೆ.

**3.** 1 ರಿಂದ 8 ನೇ ಅರ್ಜಿದಾರರು ಸಲ್ಲಿಸಿದ ಅರ್ಜಿಯ ನೋಟೀಸನ್ನು ಎದುರುದಾರರಿಗೆ ಜಾರಿ ಮಾಡಲಾಯಿತು. ಸದರಿ ನೋಟಿಸ್ ಎದುರುದಾರರಿಗೆ ಜಾರಿಯಾಗಿದ್ದು, ಎದುರುದಾರರು ನ್ಯಾಯಾಲಯಕ್ಕೆ ಹಾಜರಾಗಲು ನಿಗದಿಪಡಿಸಿದ ದಿನದಂದು ಹಾಜರಾಗದೇ ಗೈರು ಹಾಜರಾಗಿರುತ್ತಾರೆ. ತಮ್ಮ ಪ್ರಕರಣವನ್ನು ಸಾಬೀತುಪಡಿಸಲು 1 ರಿಂದ 8 ನೇ ಅರ್ಜಿದಾರರು ಅ.ಸಾ.-1 ಎಂದು ವಿಚಾರಣೆ ಮಾಡಿಕೊಂಡು, ನಿಪಿ.1 ರಿಂದ 14 ರ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

**4.** ಈ ಮೇಲಿನ ವಿದ್ಯಮಾನಗಳ ಆಧಾರದ ಮೇಲಿಂದ ನನ್ನ ಗಣನೆಗೆ ಉದ್ಭವಿಸುವ ಅಂಶವೇನೆಂದರೆಃ

**1**) 1 ರಿಂದ 8 ನೇ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲು ಯೋಗ್ಯವಾಗಿದೆಯೇ ?

**5.** ಈ ಮುಂದೆ ವಿವರಿಸಿದ ಕಾರಣಗಳಿಗಾಗಿ ಈ ಮೇಲಿನ ಅಂಶವನ್ನು ಸಕಾರತ್ಮಕವಾಗಿ ಉತ್ತರಿಸಲಾಯಿತು.

## ಃಃ ಕಾರಣಗಳು ಃಃ

**6.** 1 ರಿಂದ 8 ನೇ ಅರ್ಜಿದಾರರು ಸಲ್ಲಿಸಿದ ಅರ್ಜಿಯಲ್ಲಿನ ಅಂಶಗಳು ಹಾಗೂ ಅರ್ಜಿದಾರರ ಅ.ಸಾ.-1 ರ ಮೌಖಿಕ ಸಾಕ್ಷ್ಯ ಮತ್ತು ನಿಪಿ.1 ರಿಂದ 14 ರ ದಾಖಲೆಗಳ ಪರಿಶೀಲನೆಯಿಂದ ಸ್ಪಷ್ಟವಾಗುವ 1 ನೇ ಅರ್ಜಿದಾರರ ಮಗನಾದ ಲೇಟ್ ಭೀಮರಾಯ ತಂದೆ ಸಿದ್ದಪ್ಪ, ಇವರು ದಿನಾಂಕಃ 15-11-2020 ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕು, ಯಾಟಗಲ್ ಗ್ರಾಮದ ಅವರ ಮನೆಯಲ್ಲಿ ಮೃತಪಟ್ಟಿರುತ್ತಾರೆ. ಹಾಗೂ ಸದರಿಯವರ ಮರಣ ದಾಖಲೆಗಳು ಎದುರುದಾರರ ಕಚೇರಿಯಲ್ಲಿ ಲಭ್ಯವಿರುವುದಿಲ್ಲ. ಎದುರುದಾರರಿಗೆ ಈ ಅರ್ಜಿಯ ನೋಟಿಸ್ ಜಾರಿಯಾಗಿದ್ದರೂ ಈ ಪ್ರಕರಣದಲ್ಲಿ ಹಾಜರಾಗಿರುವುದಿಲ್ಲ. ಆದ್ದರಿಂದ 1 ರಿಂದ 8 ನೇ ಅರ್ಜಿದಾರರು ಸಲ್ಲಿಸಿರುವ ಅರ್ಜಿಯಲ್ಲಿನ ವಿಷಯಗಳು ಅವಿರೋಧವಾಗಿ ಉಳಿದಿರುತ್ತವೆ. ಆದ್ದರಿಂದ 1 ರಿಂದ 8 ನೇ ಅರ್ಜಿದಾರರ ಪ್ರಕರಣ ಸ್ವೀಕಾರಾರ್ಹವಾಗಿದೆ ಎಂದು ಈ ನ್ಯಾಯಾಲಯ ಅಭಿಪ್ರಾಯ ಪಟ್ಟಿರುತ್ತದೆ. ಈ ಕಾರಣಗಳಿಗಾಗಿ ಮೇಲಿನ ಅಂಶಗಳನ್ನು ಸಕಾರಾತ್ಮಕವಾಗಿ ಉತ್ತರಿಸಲಾಯಿತು. ಈ ಕೆಳಗಿನಂತೆ ಆದೇಶ.

## ಃಆದೇಶಃ

1 ರಿಂದ 8 ನೇ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ಜನನ ಹಾಗೂ ಮರಣ ನೊಂದಣಿ ಕಾಯಿದೆ ಕಲಂ 13(3) ರಡಿಯಲ್ಲಿ ಪುರಸ್ಕರಿಸಲಾಯಿತು. 1 ನೇ ಅರ್ಜಿದಾರರ ಮಗನಾದ ಲೇಟ್ ಭೀಮರಾಯ ತಂದೆ ಸಿದ್ದಪ್ಪ, ಇವರು ದಿನಾಂಕಃ 15-11-2020 ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕು, ಯಾಟಗಲ್ ಗ್ರಾಮದ ಅವರ ಮನೆಯಲ್ಲಿ ಮೃತಪಟ್ಟಿರುತ್ತಾರೆ. ಸದರಿಯವರ ಮರಣ ದಿನಾಂಕವನ್ನು ಮರಣ ನೋಂದಣಿ ರಿಜಿಸ್ಟರ್ ನಲ್ಲಿ ನೊಂದಾಯಿಸಿಕೊಂಡು

ಮರಣದ ಪ್ರಮಾಣ ಪತ್ರವನ್ನು 1 ರಿಂದ 8 ನೇ ಅರ್ಜಿದಾರರಿಗೆ ನೀಡಬೇಕೆಂದು ಎದುರುದಾರರಿಗೆ ನಿರ್ದೇಶಿಸಲಾಗಿದೆ.

ಅಗತ್ಯ ಶುಲ್ಕವನ್ನು ಅರ್ಜಿದಾರರು ಭರಿಸತಕ್ಕದ್ದು.

(ಗಣಕಯಂತ್ರದಲ್ಲಿಯೇ ನೇರವಾಗಿ ಉಕ್ತಲೇಖನವನ್ನು ಶೀಘ್ರಲಿಪಿಗಾರಳಿಗೆ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಿದ್ದಿ, ಸಹಿ, ಮಾಡಿ ನಂತರ ಇಂದು ದಿಃ 20 ನೇ ಜೂನ್ 2026 ರಂದು ಮುಕ್ತ ನ್ಯಾಯಾಲಯದಲ್ಲಿ ಉದ್ಘೋಶಿಸಲಾಯಿತು).

ಸಹಿ**/-**
(ಶ್ರೀ **ರಫೀಕ್ ಅಹ್ಮದ್**)
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ದೇವದುರ್ಗ.

**:: ಅನುಬಂಧ ::**

ಅರ್ಜಿದಾರರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರುಃ

ಅ.ಸಾ. ೧ ಗಂಗಮ್ಮ ಗಂಡ ಲೇಟ್ ಸಿದ್ದಪ್ಪ.

ಅರ್ಜಿದಾರರ ಪರವಾಗಿ ಗುರುತಿಸಲ್ಪಟ್ಟಿರುವ ದಾಖಲೆಗಳು **ಃ**

| | | |
|---|---|---|
| ನಿಪಿ.1 | - | ಅಲಭ್ಯ ಪ್ರಮಾಣಪತ್ರ. |
| ನಿಪಿ.2 ಮತ್ತು 3 | - | ಪತ್ರಿಕಾ ಪ್ರಕಟಣೆಗಳು. |
| ನಿಪಿ.4 ರಿಂದ 12 | - | 9 ಆಧಾರ್ ಕಾರ್ಡ್ ದೃಢಿಕೃತ ಪ್ರತಿಗಳು. |
| ನಿಪಿ.13 | - | ದೃಢೀಕೃತ ವಂಶವೃಕ್ಷ ಪ್ರಮಾಣ ಪತ್ರ. |
| ನಿಪಿ.14 | - | ವಂಶವೃಕ್ಷ ಪ್ರಮಾಣ ಪತ್ರ. |

ಎದುರುದಾರರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು **ಃ**

**-----ಇಲ್ಲ----**

ಎದುರುದಾರರ ಪರವಾಗಿ ಗುರುತಿಸಲ್ಪಟ್ಟಿರುವ ದಾಖಲೆಗಳು **ಃ**

**-----ಇಲ್ಲ------**

ಸಹಿ/-
(ಶ್ರೀ **ರಫೀಕ್ ಅಹ್ಮದ್**)
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವದುರ್ಗ.